ಇ) ಮಹಾರಾಷ್ಟ್ರ ಸರ್ಕಾರವು ದಿನಾಂಕ 13–4–2004 ರಿಂದ 27–4–2004ರವರೆಗೆ ನೀರನ್ನು ಬಿಡುಗಡೆ ಮಾಡಿದೆ.

ಈ) ಹೌದು, ಈಗಾಗಲೇ ರಾಜಾಪೂರ ಬ್ಯಾರೇಜಿನಿಂದ 2004ನೇ ಸಾಲಿನಲ್ಲಿ 1.00 ಟಿಎಂಸಿ ನೀರನ್ನು ಬಿಡುಗಡೆ ಮಾಡಲಾಗಿದ್ದು. ಇದರಿಂದ ಬೆಳಗಾಂವ ಜಿಲ್ಲೆಯ ಚಿಕ್ಕೋಡಿ, ರಾಯಬಾಗ್ ಮತ್ತು ಅಥಣಿ ತಾಲ್ಲೂಕುಗಳಲ್ಲಿ ಜನ ಜಾನುವಾರುಗಳ ಕುಡಿಯುವ ನೀರಿನ ಬಳಕೆಗಾಗಿ ಉಪಯೋಗಿಸಲಾಗಿದೆ.

ಉ) ನೀರು ತಲುಪದಿರುವ ಕೆಲವು ಪ್ರದೇಶಗಳಿಗೂ ಸಹ ನೀರು ಒದಗಿಸಲು ಮಹಾರಾಷ್ಟ್ರದಿಂದ ಹೆಚ್ಚಿನ ನೀರು ಬಿಡಿಸುವ ಕೋರಿಕೆಯೊಂದಿಗೆ, ಕರ್ನಾಟಕ ರಾಜ್ಯದಿಂದ ಒಂದು ತಂಡವು ಮಹಾರಾಷ್ಟ್ರಕ್ಕೆ ಭೇಟಿ ನೀಡಿತ್ತು. ಆದರೆ ಮಹಾರಾಷ್ಟ್ರವು ರಾಜ್ಯದ ಕೋರಿಕೆಯನ್ನು ನಿರಾಕರಿಸಿರುತ್ತದೆ.

559(582) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಏಷ್ಯಾದ ಅತಿದೊಡ್ಡ ನೀರಾವರಿ ಮತ್ತು ಪುನರ್ವಸತಿ ಯೋಜನೆಯಾಗಿರುವ ಕೃಷ್ಣಾ ಮೇಲ್ದಂಡೆ ಯೋಜನೆ ಎಂಬುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ) ತಿಳಿದಿದ್ದಲ್ಲಿ ಸಧ್ಯದ ಸ್ಥಿತಿ–ಗತಿ ಏನು; (ಪೂರ್ಣ ವಿವರ ನೀಡುವುದು);

ಇ) ಸದರಿ ಯೋಜನೆಯ ಮುಖ್ಯ ಹುದ್ದೆಗಳೆ ಖಾಲಿ ಬಿದ್ದಿರುವುದು ನಿಜವೇ;

ಈ) ಹಾಗಿದ್ದಲ್ಲಿ, ಯಾವ ಯಾವ ಪ್ರಮುಖ ಹುದ್ದೆಗಳು ಖಾಲಿ ಇವೆ;

ಉ) 12 ಸಾವಿರ ಕೋಟಿ ರೂ. ವೆಚ್ಚದಲ್ಲಿ 20 ಲಕ್ಷ ಎಕರೆ ಜಮೀನಿಗೆ ನೀರಾವರಿ ಕಲ್ಪಿಸುವ ಇದಕ್ಕೆ ಈ ಗತಿಯಾದರೆ ಯೋಜನೆ ಕುಂಠಿತವಾಗುವುದೆಂದು ಸರ್ಕಾರ ಭಾವಿಸುವುದಿಲ್ಲವೇ;

ಊ) ಭಾವಿಸಿದ್ದಲ್ಲಿ ಪ್ರಮುಖ ಹುದ್ದೆಗಳು ಖಾಲಿ ಇರಲು ಕಾರಣಗಳೇನು ಹಾಗೂ ಈ ಹುದ್ದೆಗಳ ಭರ್ತಿಗೆ ಯಾವ ಕ್ರಮವನ್ನು ಸರ್ಕಾರ ಕೈಗೊಂಡಿದೆ;

ಋ) ಈ ಹುದ್ದೆಗಳನ್ನು ಯಾವಾಗ ತುಂಬಲಾಗುತ್ತದೆ ಹಾಗೂ ನೇಮಕ ವಿಳಂಬದಿಂದ ಉಂಟಾದ ಅವ್ಯವಸ್ಥೆ ಗೊಂದಲಗಳಿಗೆ ಯಾವ ಪರಿಹಾರ ಒದಗಿಸಲಾಗಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ತಿಳಿದಿದೆ

ಆ) ಈ ಯೋಜನೆಯಡಿಯಲ್ಲಿ ವಿವಿಧ ಅಂಗಗಳ ಇತ್ತೀಚಿನ ಪರಿಸ್ಥಿತಿಯನ್ನು ಈ ಕೆಳಗಿ ವಿವರಿಸಿದೆ.

1.	ಆಲಮಟ್ಟಿ ಅಣೆಕಟ್ಟು	– ಮುಗಿದಿದೆ
2.	ನಾರಾಯಣಪುರ ಅಣೆಕಟ್ಟು	– ಮುಗಿದಿದೆ
3.	ನಾರಾಯಣಪುರ ಎಡದಂಡೆ ಕಾಲುವೆ	

	ಶಹಾಪುರ ಶಾಖಾ ಕಾಲುವೆ ಮುದಬಾಳ್ ಶಾಖಾ ಕಾಲುವೆ ಮತ್ತು ಇಂಡಿ ಶಾಖಾ ಕಾಲುವೆಗಳು	ಪೂರ್ಣಗೊಂಡಿದೆ
4.	ಜೇವರ್ಗಿ ಶಾಖಾ ಕಾಲುವೆ, ಆಲಮಟ್ಟಿ ಎಡದಂಡೆ ಏತ ಕಾಲುವೆ ಆಲಮಟ್ಟಿ ಬಲದಂಡೆ ಕಾಲುವೆ ನಾರಾಯಣಪುರ ಬಲದಂಡೆ ಕಾಲುವೆ ಹಾಗೂ ರಾಂಪುರ ಏತ ನೀರಾವರಿ ಯೋಜನೆಗಳು	ಮುಕ್ತಾಯ ಹಂತದಲ್ಲಿ ಇರುತ್ತದೆ. ಬಾಕಿ ಕಾಮಗಾರಿಗಳು ಮಾರ್ಚ್ 2005 ರೊಳಗೆ ಪೂರ್ಣಗೊಳ್ಳಲಿವೆ.
5.	ಇತರೆ ಏತ ನೀರಾವರಿ ಕಾಮಗಾರಿಗಳಾದ ಮುಳವಾಡ ಏತ ನೀರಾವರಿ ಇಂಡಿ ಏತ ನೀರಾವರಿ	ಇವುಗಳ ಕಾಮಗಾರಿಗಳು ಪ್ರಗತಿಯಲ್ಲಿದ್ದು ಡಿಸೆಂಬರ್ 2005 ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಒಟ್ಟಾರೆ ಕೃಷ್ಣಾ ಮೇಲ್ದಂಡೆ ಯೋಜನೆಯ ಸ್ಕೀಂ–ಎ ರಡಿಯಲ್ಲಿಯ ಎಲ್ಲಾ ಕಾಮಗಾರಿಗಳನ್ನು ಡಿಸೆಂಬರ್ 2005ರೊಳಗಾಗಿ ಪೂರ್ಣಗೊಳ್ಳಲಿವೆ.

ಇ) ಹೌದು.

ಈ) ಈ ಯೋಜನೆಯಲ್ಲಿ ಪ್ರಮುಖ ಹುದ್ದೆಗಳ ವಿವರ ಈ ಕೆಳಗಿನಂತಿದೆ. ಆಯುಕ್ತರು, ಕೃಷ್ಣಾ ಮೇಲ್ದಂಡೆ ಯೋಜನೆ, ಪುನರ್ ವಸತಿ ಮತ್ತು ಭೂಸ್ವಾಧೀನ.

ಮುಖ್ಯ ಇಂಜಿನಿಯರ್ ಹುದ್ದೆಗಳು

1. ಅಣೆಕಟ್ಟು ವಲಯ ಆಲಮಟ್ಟಿ–ಖಾಲಿ ಇರುತ್ತದೆ.
2. ಕಾಲುವೆ ವಲಯ ನಂ. 1 ಭೀಮರಾಯನಗುಡಿ–ಖಾಲಿ ಇರುತ್ತದೆ.
3. ಕಾಲುವೆ ವಲಯ ನಂ. 2 ಕೆಂಭಾವಿ–ಖಾಲಿ ಇರುತ್ತದೆ.
4. ಕಾರ್ಯಾಚರಣೆ ಮತ್ತು ನಿರ್ವಾಹಣೆ ವಲಯ, ನಾರಾಯಣಪುರ–ಖಾಲಿ ಇರುತ್ತದೆ.

ಅಧೀಕ್ಷಕ ಅಭಿಯಂತರರು

1. ಅಧೀಕ್ಷಕ ಅಭಿಯಂತರರು,
   ವ್ಯವಸ್ಥಾಪಕ ನಿರ್ದೇಶಕರ ಕಛೇರಿ, ಆಲಮಟ್ಟಿ–ಭರ್ತಿ ಮಾಡಬೇಕಾಗಿದೆ
   ಗುಣ ನಿಯಂತ್ರಣ ಮತ್ತು ತನಿಖಾ ವೃತ್ತ ಭೀಮರಾಯನಗುಡಿ–ಭರ್ತಿಮಾಡಬೇಕಾಗಿದೆ

ಉ) ಇಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆ ಸ್ಕೀ–ಎ ರಡಿಯ ಎಲ್ಲಾ ಕಾಮಗಾರಿಗಳು ತೀವ್ರ ಗತಿಯಲ್ಲಿ ಪ್ರಗತಿಯಲ್ಲಿದ್ದು ಎಲ್ಲಾ ಬಾಕಿ ಕಾಮಗಾರಿಗಳನ್ನು ಡಿಸೆಂಬರ್ 2005ರೊಳಗಾಗಿ ಪೂರ್ಣಗೊಳಿಸಲು ಯೋಜಿಸಲಾಗಿದೆ. ಈ ಯೋಜನೆಯಡಿ ಕಲ್ಪಿಸಲು ಯೋಜಿಸಲಾಗಿರುವ 6.22 ಲಕ್ಷ ಹೆ. (15.40 ಲಕ್ಷ ಎಕರೆ) ಪ್ರದೇಶದ ಪೈಕಿ ಈಗಾಗಲೇ 4.61 ಲಕ್ಷ ಹೆ. (11.40 ಲಕ್ಷ ಎಕರೆ) ಪ್ರದೇಶದ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ ಹಾಗೂ ಈ ಪೈಕಿ 3.80 ಲಕ್ಷ

ಹೆ. (9.40 ಲಕ್ಷ ಎಕರೆ) ಪ್ರದೇಶಕ್ಕೆ 2004ರ ಮುಂಗಾರಿನಲ್ಲಿ ನೀರಾವರಿ ಸೌಲಭ್ಯ ಒದಗಿಸಲಾಗುವುದು. ಉಳಿದ ಪ್ರದೇಶಕ್ಕೆ ರೈತರು ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ನೀರೆತ್ತಿ ಉಪಯೋಗಿಸುತ್ತಿದ್ದಾರೆ.

ಊ) ಮುಖ್ಯ ಅಭಿಯಂತರರ ಹುದ್ದೆಗಳು ವೃಯೋನಿವೃತ್ತಿಯಿಂದಾಗಿ ಹುದ್ದೆಗಳು ಖಾಲಿ ಇರುತ್ತವೆ.

ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಋ) ಖಾಲಿ ಹುದ್ದೆಗಳಿಗೆ ಪ್ರಭಾರ ವ್ಯವಸ್ಥೆ ಮಾಡಿರುವುದರಿಂದ ಇದು ಉದ್ಭವಿಸುವುದಿಲ್ಲ.

560(586) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ನಾರಾಯಣಪುರ ಎಡದಂಡೆ ಕಾಲುವೆ ಹಾಗೂ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಿಗೆ ನೀರೊದಗಿಸುವ ತುಂಗಭದ್ರಾ ಎಡದಂಡೆ ಮುಖ್ಯ ನಾಲೆಗಳ ದುರಸ್ಥಿ ಕಾರ್ಯ ಪೂರ್ಣಗೊಂಡಿದೆಯೇ;

ಆ) ಇನ್ನೂ ಪೂರ್ಣಗೊಳ್ಳದೇ ಇರಲು ಕಾರಣಗಳೇನು;

ಇ) ನಾಲೆಗಳ ದುರಸ್ತಿ ಕಾರ್ಯ ಪೂರ್ಣವಾಗದಿರುವ ಹಿನ್ನೆಲೆಯಲ್ಲಿ ಕಾಲುವೆಗಳ ಮೂಲಕ ನೀರು ಹರಿಸಲು ಅನುಕೂಲವಾಗಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ಪೂರ್ಣಗೊಂಡಿರುತ್ತದೆ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

561(608) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಲಪ್ರಭಾ ನದಿಗೆ ಹೆಚ್ಚುವರಿ 7.5 ಟಿಎಂಸಿ ನೀರು ಸಂಗ್ರಹವಾಗುವ ಕಳಸಾಬಂಡೂರ ನಾಲಾ ಯೋಜನೆ ವಿವರಗಳೇನು; ಹಾಗೂ ಈ ಯೋಜನೆ ಅನುಷ್ಠಾನ ತಡವಾಗಲು ಕಾರಣಗಳು ಯಾವುವು;

ಆ) ಈ ಯೋಜನೆ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಇನ್ನು ಎಷ್ಟು ಅವಧಿಯಲ್ಲಿ ಈ ಯೋಜನೆ ಅನುಷ್ಠಾನ ಆಗಲಿದೆ (ವಿವರ ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ಅ) "ಕಳಸಾ ನಾಲಾ" ಮತ್ತು "ಬಂಡೂರ ನಾಲಾ" ಯೋಜನೆಯ ವಿವರಗಳು: